ಸಂದೇಶವು ಬಂದಿರುತ್ತದೆ.

''ದಿನಾಂಕ 31.8.1995ರಂದು ರಚಿಸಲಾದ ರಾಜ್ಯದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರವಾದ ತನಿಖೆಯನ್ನು ನಡೆಸಿ ಸಮತಿಯು ತನ್ನ ವರದಿಯನ್ನು ಸಲ್ಲಿಸಲು ವಿಧಾನಪರಿಷತ್ತು 1996ರ ಸೆಪ್ಟೆಂಬರ್ ಅಂತ್ಯದವರೆಗೆ ಕಾಲಾವಕಾಶವನ್ನು ವಿಸ್ತರಿಸಲು ತನ್ನ ಸಹಮತಿಯನ್ನು ನೀಡಿದೆ ಎಂದು ಈ ಮೂಲಕ ತಿಳಿಸುತ್ತಿದ್ದೇನೆ''

ಅಧ್ಯಕ್ಷರು:- ಮಾನ್ಯ ಸದಸ್ಯರುಗಳಾದ ಡಿ.ಬಿ.ಇನಾಂದಾರ್‌ರವರು ಮತ್ತು ಶ್ರೀರಂಗದೇವರಾಯಲು ಅವರು ಅವರ ಮತ ಕ್ಷೇತ್ರದಲ್ಲಿ ಹೈಸ್ಕೂಲ್ ವಿಚಾರದಲ್ಲಿ ಆಗಿರುವಂತಹ ತೊಂದರೆ ಬಗ್ಗೆ ಪ್ರಸ್ತಾಪ ಮಾಡಿದಿರಿ. ನಾನು ಆ ಬಗ್ಗೆ ಸಂಬಂಧಿಸಿದ ಸಚಿವರ ಜೊತೆಗೆ ಮಾತನಾಡಿದ್ದೇನೆ. ತಾವಿಬ್ಬರೂ ದಯಮಾಡಿ ಇವತ್ತು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ನನ್ನ ಕಛೇರಿಯಲ್ಲಿ ನನ್ನನ್ನು ಭೇಟಿಯಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಮಾನ್ಯ ಆಹಾರ ಸಚಿವರಿಗೆ ನಾನೊಂದು ಸೂಚನೆಯನ್ನು ಕೊಡಬಯಸುತ್ತೇನೆ. ಮೊನ್ನೆ ಶೂನ್ಯ ವೇಳೆಯಲ್ಲಿ ಸೋಮವಾರ ಪೇಟೆಯ ಕ್ಷೇತ್ರದ ಶಾಸಕರಾದ ಶ್ರೀಮಾನ್ ಅಪ್ಪಚ್ಚು ರಂಜನ್‌ರವರು ಕಳಪೆ ಮಟ್ಟದ ಅಕ್ಕಿಯನ್ನು ವಿತರಣೆ ಮಾಡಿದ್ದಾರೆ ಎಂದು ಹೇಳಿ, ಅಕ್ಕಿಯನ್ನು ಸದನದಲ್ಲಿ ಪ್ರದರ್ಶನ ಮಾಡಿದರೆ, ನಿಮ್ಮ ಅಧಿಕಾರಿಗಳು ಆ ಅಂಗಡಿಯವನ ಲೈಸೆನ್ಸ್ ಅನ್ನು ಕ್ಯಾನ್ಸಲ್ ಮಾಡಿದ್ದಾರೆ. ನೀವು ಯಾವ ರೀತಿಯಾದ ಅಕ್ಕಿಯನ್ನು ಅಂಗಡಿಯವನಿಗೆ ಸಪ್ಲೈ ಮಾಡುತ್ತೀರೋ, ಅಂತಹ ಅಕ್ಕಿಯನ್ನು ಅಂಗಡಿಯವನು ಮಾರುತ್ತಾನೆ. ಅಂಗಡಿಯವನೇ ಅಕ್ಕಿಯನ್ನು ಕೊಂಡು ತಂದು ಮಾರುತ್ತನೆಯೇ? ಮಾನ್ಯ ಶಾಸಕರು ಇಲ್ಲಿ ಪ್ರಸ್ತಾಪ ಮಾಡಿದ ವಿಷಯಕ್ಕೆ ಸಂಬಂಧಪಟ್ಟಂತೆ ಯಾರು ನಿಮ್ಮ ಇಲಾಖೆಯ ಅಧಿಕಾರಿ ವಿವೇಚನೆ ಇಲ್ಲದೇ ಅಂಗಡಿಯವನ ಲೈಸೆನ್ಸ್ ಅನ್ನು ಕ್ಯಾನ್ಸಲ್ ಮಾಡಿದ್ದಾರೆ, ಇದು ಮಹಳ ದುಬಾರಿ ವರ್ತನೆಯಾಯಿತು, ತಕ್ಷಣ ಆ ಅಧಿಕಾರಿಯನ್ನು ಅಮಾನತ್ತಿನಲ್ಲಿ ಇಡಬೇಕೆಂದು ನಾನು ಮಾನ್ಯ ಆಹಾರ ಮಂತ್ರಿಗಳಿಗೆ ಸೂಚನೆ ಕೊಡುತ್ತಿದ್ದೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ತಾವು ಸೂಕ್ತವಾದಂತಹ ಸಲಹೆಯನ್ನು ಕೊಟ್ಟಿದ್ದೀರಿ. ಈ ರೀತಿಯಾದಂತಹ ಲೋಪದೋಷಗಳನ್ನು ಎತ್ತಿ ತೋರಿಸಲಿಕ್ಕೇ ನಾವಿಲ್ಲಿ ಇರುವಂಥಾದ್ದು. ಅಂಗಡಿಯವನು ಏನು ಶಾಸಕರಿಗೆ ಅಕ್ಕಿಯನ್ನು ಸಪ್ಲೈ ಮಾಡಿರುವುದಿಲ್ಲ. ಶಾಸಕರು ತಮಗೆ ಕಂಡದ್ದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಬಸವಣ್ಣೆಪ್ಪನವರೇ, ತಮ್ಮ ಇಲಾಖೆಯ ಬೇರೆ ಅಧಿಕಾರಿಗಳೂ ಈ ರೀತಿಯ ಪ್ರವೃತ್ತಿ ತೋರಿದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು:- ನಾನೇನು ಹೇಳುತ್ತೇನೆ ಎಂದರೆ, ಇದು ಶಾಸನ ಸಭೆ. ಇದರ ಪಾವಿತ್ರತೆಯನ್ನು ಕಾಪಾಡುವುದಕ್ಕೆ ತಾವೆಲ್ಲರೂ ಸಹಕರಿಸಿ. ಪ್ರತಿ ಕ್ಷಣದಲ್ಲೂ ಸಹ ನಾವು ಈ ಕೆಲಸವನ್ನು ಮಾಡೋಣ. ಮಾನ್ಯ ಶಾಸಕರು ಪ್ರಸ್ತಾಪ ಮಾಡಿದಂತಹ ಒಂದು ವಿಚಾರದ ಬಗ್ಗೆ ಆ ಅಧಿಕಾರಿ ಆ ರೀತಿ ನಡೆದುಕೊಂಡರೆ, ನಾನು ಆ ರೀತಿ ಆಗುವುದಕ್ಕೆ

ಅವಕಾಶ ಕೊಡುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಆ ವಿಶ್ವಾಸವನ್ನು ನನ್ನ ಮೇಲೆ ಇಟ್ಟುಕೊಳ್ಳಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ವಂದನೆಗಳು.

ಅಧ್ಯಕ್ಷರು:- ಈಗ ಗಮನ ಸೆಳೆಯುವ ಸೂಚನೆಗಳು. ಶ್ರೀಯುತರುಗಳಾದ.....

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಅದಕ್ಕಿಂತ ಮುಂದೆ.....

ಅಧ್ಯಕ್ಷರು:- ದಯಮಾಡಿ ಬೇಡಿ, ಇವತ್ತೊಂದು ದಿವಸ, ತಾವು ನನ್ನೊಂದಿಗೆ ಸಹಕರಿಸಿ. ನಾಳೆ ಆ ಪದ್ಧತಿಯನ್ನು ಮುಂದುವರೆಸೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಶೂನ್ಯ ವೇಳೆ ಇವತ್ತು ಬೇಡ ಸಾರ್, ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ಇವತ್ತು ನಾವು ಡಿಮ್ಯಾಂಡ್ಸ್ ಬಗ್ಗೆ ಮಾತನಾಡಬೇಕಾಗಿದೆ. ಪರ್‌ಫಾರ್‌ಮೆನ್ಸ್ ಬಜೆಟ್ ಬಗ್ಗೆ ಇದುವರೆವಿಗೂ ಮೂರು ಮಾತ್ರ ನಮಗೆ ಬಂದಿದೆ. ಇವತ್ತು ಚರ್ಚೆಗಿರುವ ಬೇಡಿಕೆಗಳಲ್ಲಿ, ಒಂದು ಬೇಡಿಕೆಗೆ ಸಂಬಂಧಪಟ್ಟಂತೆ ಮಾತ್ರ ಪರ್‌ಫಾರ್ಮೆನ್ಸ್ ಬಜೆಟ್ ಬಂದಿದೆ. ಹೀಗಾದರೆ ನಾವು ಇಲ್ಲಿ ಕೆಲಸ ಮಾಡುವುದು ಹೇಗೆ? ಕಳೆದ ಐದು ದಿವಸಗಳಿಂದ ದಿನನಿತ್ಯ ಈ ವಿಷಯದ ಬಗ್ಗೆ ನಾವಿಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ. ಪರ್‌ಪಾರ್ಮೆನ್ಸ್ ಬಜೆಟ್ ಇಲ್ಲದೇ, ಡೀಟೈಲ್ಸ್ ಇಲ್ಲದೇ ಈ ಕಡೆ ಕುಳಿತಿರತಕ್ಕಂತಹ ಶಾಸಕರು ಹೇಗೆ ತಾನೇ ಕೆಲಸ ಮಾಡುತ್ತಾರೆ?

ಅಧ್ಯಕ್ಷರು:- ಈ ವಿಷಯದ ಬಗ್ಗೆ ನನಗೆ ನಿಮ್ಮಷ್ಟೇ ವ್ಯಥೆ ಮತ್ತು ಖೇದ ಎರಡೂ ಇದೆ. ಏಕೆ ಈ ರೀತಿಯಾಗುತ್ತಿದೆ ಎಂಬುದು ನನಗೆ ಅರ್ಥವೇ ಆಗುತ್ತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾಲೆ ರಾಜ್ಯದ ಜನರಿಗೆ ಪತ್ರಿಕಾ ಮಾಧ್ಯಮದ ಮೂಲಕ, ನಾವೇನೋ ಸಿದ್ಧತೆ ಮಾಡಿಕೊಂಡು, ಸೀರಿಯಸ್ ಆಗಿ ಇಲ್ಲಿ ಕೆಲಸ ಮಾಡಲಿಲ್ಲ ಎನ್ನುವಂತಹ ಆಪಾದನೆಗೂ ನಾವು ಗುರಿಯಾಗಬಹುದು. ಇನ್ನೊಂದು ನಾನು ನಿಮಗೆ ಸಲಹೆ ಕೊಡುತ್ತೇನೆ. ಭೋಜನ ವಿರಾಮದ ವೇಳೆಗೆ ಅವಕಾಶ ಕೊಡದಂತೆ ನಾವಿಲ್ಲಿ ಬೇಡಿಕೆಗಳ ಮೇಲೆ ಚರ್ಚೆ ನಡೆಸಲು ಸಿದ್ಧರಾಗಿದ್ದೇವೆ. ದಯಮಾಡಿ ಇದನ್ನು ರದ್ದು ಮಾಡಿ ಸಾಯಂಕಾಲ ಏಳು ಗಂಟೆಯವರೆಗೆ ಕುಳಿತುಕೊಳ್ಳೋಣ; ಈಗಾಗಲೇ ನಾವು ಸಾಕಷ್ಟು ಕಾಲವನ್ನು ಕಳೆದುಕೊಂಡಿದ್ದೇವೆ. ಲಂಚ್ ಹವರ್ ಬೇಡ ಸಾಯಂಕಾಲ ಏಳು ಗಂಟೆಯವರೆಗೆ ಕುಳಿತು ಮಾತನಾಡೋಣ.

ಅಧ್ಯಕ್ಷರು:- ನಾನು ಅದಕ್ಕೆ ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ನಿಮ್ಮ ನಿರ್ಧಾರಕ್ಕೆ ನಾವು ಒಪ್ಪುತ್ತೇವೆ. ಇದು ಶೂನ್ಯ ವೇಳೆ ನಮ್ಮ ಹಕ್ಕು ಆದನ್ನೇ ಕಡಿದು ಹಾಕಿಸರೆ ನಮ್ಮ ಪರಿಸ್ಥಿತಿ ಏನು? ''ಹರಕೊಲ್ಲಲ್ ಪರಕಾಯ್ವನೆ'' ಏನ್ನುವಂತೆ. ಈ ಸದನದಲ್ಲಿ ಅಧ್ಯಕ್ಷರಾಗಿ ಎರಡು ನಿಮಿಷ ನಮಗೆ ಅವಕಾಶ ಕೊಟ್ಟರೆ, ಒಂದುವರೆ ನಿಮಿಷನಲ್ಲಿ ಮುಗಿಸುತ್ತೇವೆ.